ಶಿವಾನುಭವ ಗ್ರಂಥಮಾಲಾ ನಂ॥ ೬೩

ಕವಿ ಗುರುಬಸವಕೃತ.

# ಅವಧೂತ ಗೀತೆ

ಸಂಪಾದಕರು:

ರಾ. ಬ. ಫ. ಜಿ. ಹಳಕಟ್ಟಿ, ಬಿ. ಎ., ಎಲ್. ಎಲ್. ಬಿ.

ವಿಜಾಪುರ.

೧೯೪೩

( ಇದರ ಯಾವತ್ತು ಅಧಿಕಾರವು ಕಾದಿಡಲ್ಪಟ್ಟಿದೆ. )

ಬೆಲೆ ರೂ॥ ೦—[illegible]

1943
KB 531
128
033.153 Gur
Ava
7983
128

A x 10
128

7983

ಇದನ್ನು ವಿಜಾಪುರದಲ್ಲಿ
ರಾ. ಬ. ಪಿ. ಜಿ. ಹಳಕಟ್ಟಿ ಬಿ. ಎ., ಎಲ್. ಎಲ್. ಬಿ. ಇವರು
ತಮ್ಮ ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಿಸಿದರು.
ಮತ್ತು ಅವರು ವಿಜಾಪುರದಲ್ಲಿ
ಉಪಲಿಬುರುಜದ ಹತ್ತರ ೧೬೨೦ (ಅ) ನೇ ಮನೆಯಲ್ಲಿ
ಪ್ರಕಟಿಸಿದರು.

7983
LIBRA...
...AY COLL...
...APUR.

# ಪ್ರಸ್ತಾವನೆ

ಗುರುಬಸವ ಕವಿಯು ರಚಿಸಿದ 'ಅವಧೂತ ಗೀತೆ' ಎಂಬ ಗ್ರಂಥವನ್ನು ನಾವು ಪ್ರಸಿದ್ಧಿಸಿದ್ದೇವೆ. ಈ ಕವಿಯು ವೀರಶೈವ ಗ್ರಂಥಕಾರರಲ್ಲಿ ಉಚ್ಚ ಸ್ಥಾನವನ್ನು ಹೊಂದಿದವನಾಗಿದ್ದಾನೆ. ಅವನು ೭ ಕಾವ್ಯಗಳನ್ನು ಬರೆದಿದ್ದು ಅವು 'ಸಪ್ತ ಕಾವ್ಯ'ಗಳೆಂದು ಪ್ರಸಿದ್ಧಿಯನ್ನು ಹೊಂದಿವೆ. ಅವು ಶಿವಯೋಗಾಂಗ ಭೂಷಣ, ಸದ್ಗುರು ರಹಸ್ಯ, ಕಲ್ಯಾಣೇಶ್ವರ, ಸ್ವರೂಪಾಮೃತ, ವೃಷಭಗೀತೆ, ಅವಧೂತ ಗೀತೆ. ಮತ್ತು ಮನೋವಿಜಯ ಎಂದಿರುತ್ತವೆ. ಶಿವಯೋಗಾಂಗ ಭೂಷಣವು ಪರಿವರ್ಧಿನಿಯಲ್ಲಿ, ಸದ್ಗುರು ರಹಸ್ಯವು ಭಾಮಿನಿ ಷಟ್ಪದಿಯಲ್ಲಿ, ಕಲ್ಯಾಣೇಶ್ವರವು ಪರಿವರ್ಧಿನಿಯಲ್ಲಿ, ಸ್ವರೂಪಾಮೃತವು ಭಾಮಿನಿಯಲ್ಲಿ, ವೃಷಭಗೀತೆಯು ಭೋಗಷಟ್ಪದಿಯಲ್ಲಿ, ಅವಧೂತ ಗೀತೆಯು ಚೌಪದದಲ್ಲಿ, ಮತ್ತು ಮನೋವಿಜಯವು ಕುಸುಮಷಟ್ಪದಿಯಲ್ಲಿ ರಚಿಸಲ್ಪಟ್ಟಿವೆ.

ಚನ್ನಬಸವ ಪುರಾಣವನ್ನು ರಚಿಸಿದ ವಿರೂಪಾಕ್ಷ ಪಂಡಿತನು ತನ್ನ ಕಾವ್ಯದಲ್ಲಿ ಗುರುಬಸವ ಕವಿಯನ್ನು ಉಲ್ಲೇಖಿಸಿದ್ದಾನೆ. ಅವನು ೧೪೧೯ ರಿಂದ ೧೪೪೪ರ ವರೆಗೆ ವಿಜಯನಗರ ರಾಜ್ಯವನ್ನು ಆಳಿದ ೨ನೇ ದೇವರಾಜನ ಆಳಿಕೆಯಲ್ಲಿದ್ದ ೧೦೧ ವಿರಕ್ತರಲ್ಲಿ ಗಣಿಸಲ್ಪಟ್ಟಿದ್ದಾನೆ. ಆದ್ದರಿಂದ ಈತನು ಇದೇ ಕಾಲಕ್ಕೆ ಪ್ರಸಿದ್ಧಿಗೆ ಬಂದಿರಬೇಕೆಂಬುದು ಸ್ಪಷ್ಟವಿದೆ.

ಗುರುಬಸವ ಕವಿಯು ವಚನಕಾರರನ್ನು ತನ್ನ ಗ್ರಂಥಗಳಲ್ಲಿ ಬಹಳ ಸ್ತುತಿಸಿರುತ್ತಾನೆ. ಅವನು ಬಸವೇಶ್ವರಾದಿ ಶಿವಶರಣರ ವಿಷಯವಾಗಿ ಅತ್ಯಂತ ಪೂಜ್ಯ ಭಾವವುಳ್ಳವನು. ಬಸವೇಶ್ವರನ ವಿಷಯವಾಗಿ 'ವೃಷಭಗೀತೆ' ಎಂಬ ಸ್ವತಂತ್ರ ಕಾವ್ಯವನ್ನು ಬರೆದಿದ್ದಾನೆ. ಹಾಗೆಯೇ ಅವನು ಒಳ್ಳೇ ಜ್ಞಾನಿಯೂ ಯೋಗಿಯೂ ಆಗಿದ್ದನೆಂದು

ಕಂಡುಬರುತ್ತದೆ. ಅವನು ಯೋಗಾಭ್ಯಾಸದಲ್ಲಿ ಬಹಳ ಆಸಕ್ತಿಯುಳ್ಳವನೆಂಬುದು ಈಗ ನಾವು ಪ್ರಸಿದ್ಧಿಸಿದ ಅವಧೂತಗೀತೆ ಮತ್ತು ಇನ್ನೂ ಪ್ರಸಿಧ್ಧವಾಗದ ಶಿವಯೋಗಾಂಗ ಭೂಷಣ ಇವುಗಳಿಂದ ಚನ್ನಾಗಿ ತಿಳಿದುಬರುತ್ತದೆ. ಅವನು ವೀರಶೈವ ತಾತ್ವಿಕ ವಿಷಯಗಳಲ್ಲಿಯೂ ಚನ್ನಾಗಿ ಬಲ್ಲಿದನಾಗಿದ್ದನು. ಇದು ಅವನ 'ಸ್ವರೂಪಾಮೃತ ಗ್ರಂಥ' ದಿಂದ ವ್ಯಕ್ತವಾಗುತ್ತದೆ. 'ಸದ್ಗುರು ರಹಸ್ಯ', 'ಮನೋವಿಜಯ' ಈ ಗ್ರಂಥಗಳಲ್ಲಿ ಶಿವಯೋಗವನ್ನು ಸಾಧಿಸಲು ಸಾಧನೀಭೂತವಾದ ವಿಷಯುಗಳನ್ನು ಅವನು ನಿರೂಪಿಸಿದ್ದಾನೆ.

ಅವನು ಷಟ್‌ಸ್ಥಲ ಸಿದ್ಧಾಂತದೊಡನೆ ಯೋಗ ಮತ್ತು ವೇದಾಂತ ಈ ವಿಷಯುಗಳನ್ನು ಹೆಣೆಯಲು ಪ್ರಯತ್ನಿಸಿದ್ದಾನೆ. ಅವನು ಹೆಚ್ಚಿನ ತರಗತಿಯ ತತ್ವಜ್ಞಾನಿಯೂ ಯೋಗಸಾಧಕನೂ ಆಗಿದ್ದನೆಂದು ಅವನ ಗ್ರಂಥಗಳಿಂದ ತಿಳಿದು ಬರುತ್ತವೆ. ಅವುಗಳಲ್ಲಿಯ ಅವನ ನಿರೂಪಣೆಗಳು ಅವನ ವ್ಯಕ್ತಿತ್ವವನ್ನು ಚನ್ನಾಗಿ ಹೊರಗೆಡಹುತ್ತದೆ. ಹೇಗೆ ನಿಜಗುಣ ಶಿವಯೋಗಿಯು ವೀರಶೈವನಾಗಿಯೂ ಪಾರಮಾರ್ಥಿಕ ವಿಷಯ ನಿರೂಪಣೆಯಲ್ಲಿ ತನ್ನದೊಂದನ್ನು ಹೊರಗೆಡಹುತ್ತಾನೋ, ಹಾಗೆಯೇ ಗುರುಬಸವ ಕವಿಯು ತನ್ನ ಗ್ರಂಥಗಳಲ್ಲಿ ತನ್ನ ವೈಶಿಷ್ಟ್ಯವನ್ನು ತೋರಿಸಿದ್ದಾನೆ.

ಶಿವಶರಣರ ವಚನಗಳು ವ್ಯಕ್ತಿಗಳಲ್ಲಿರುವ ಶಕ್ತಿಯನ್ನು ವಿಕಾಸಗೊಳಿಸಲು ಸಹಾಯಕವಾಗಿರುತ್ತವೆ. ಅವುಗಳಲ್ಲಿಯ ತತ್ವಗಳಂತೆ ಆಚರಿಸಿ ತಮಗುಂಟಾದ ಅನುಭವಗಳನ್ನು ತಮ್ಮ ಗ್ರಂಥಗಳಲ್ಲಿ ಈ ಶಿವಶರಣರು ಪ್ರಕಾಶ ಪಡಿಸುತ್ತ ಬಂದಿದ್ದಾರೆ. ಆದ್ದರಿಂದ ಅವರ ಪ್ರತಿಯೊಂದು ವಚನದಲ್ಲಿ ಕೆಲವೊಂದು ವೈಶಿಷ್ಟ್ಯವು ಕಂಡುಬರುತ್ತವೆ. ಇದು ವೀರಶೈವ ಸಂಸ್ಕೃತಿಯ ಪ್ರಗತಿಯ ದ್ಯೋತಕವೇ ಆಗಿರುತ್ತದೆ.

ಅವಧೂತ ಗೀತೆಯಲ್ಲಿಯ ವಿಷಯಗಳು ವೀರಶೈವ ವಚನಕಾರರು ಸಂಸಾರ ಹೇಯಸ್ಥಲದಲ್ಲಿ ನಿರೂಪಿಸುವ ವಿಷಯಗಳನ್ನು ಬಹಳ ಹೋಲುತ್ತವೆ. ಮನುಷ್ಯನು ಸಂಸಾರದಲ್ಲಿ ಮಗ್ನನಾಗದೆ ಪರಮಾರ್ಥಿಕ ಸೌಖ್ಯವನ್ನು ಹೊಂದಬೇಕು, ಅವನು ಸಂಸಾರದಲ್ಲಿ ಯಾವಾ



ಗಲೂ ಮುಳುಗಿಕೊಂಡು ದುಃಖದಲ್ಲಿ ತೊಳಲಾಡಬಾರದು, ಯೋಗಾಭ್ಯಾಸದಲ್ಲಿ ನಿರತನಾಗಿ ಜಗತ್ತಿನಲ್ಲಿ ಇದ್ದೂ ಇಲ್ಲದಂತಿರಬೇಕು, ಕೇವಲ ವಿರಕ್ತ ಮಾರ್ಗದಿಂದ ನಡೆಯುತ್ತ ಕಡೆಗೆ ಅವಧೂತ ಸ್ಥಿತಿಯನ್ನು ಹೊಂದಬೇಕು, ಇಂಥ ಆಚರಣೆಯಿಂದ ಮನುಷ್ಯನು ನಿಜ ಸೌಖ್ಯವನ್ನು ಹೊಂದುತ್ತಾನೆಂದು ಈ ಗ್ರಂಥದಲ್ಲಿ ಬೋಧೆಗಳಿರುತ್ತವೆ.

ಈ ಕಾವ್ಯದಲ್ಲಿ ಗುರುಬಸವ ಕವಿಯು ತನ್ನ ನಿರೂಪಣೆಗೋಸ್ಕರ ಬಹು ಗಡುಚಾದ ವಿಷಯವನ್ನು ತೆಗೆದುಕೊಂಡಿದ್ದಾನೆ. ಆದರೂ ಅವನ ವಿಚಾರಗಳು ಬಹು ತಿಳಿಯಾದ ಭಾಷೆಯಲ್ಲಿ ನಿರೂಪಿಸಲ್ಪಟ್ಟಿವೆ. ಅವನು ಕನ್ನಡ ಭಾಷೆಯ ಮೇಲೆ ಅತ್ಯಂತ ಪ್ರಭುತ್ವವುಳ್ಳವನಾಗಿದ್ದಾನೆಂಬದು ಈ ಗ್ರಂಥದಿಂದ ತಿಳಿದುಬರುತ್ತದೆ. ಅವಧೂತಗೀತೆಯು ನಾಲ್ಕು ಚರಣಗಳುಳ್ಳ ಚೌಪದವಾಗಿದೆ. ಅದು ಹಾಡಲಿಕ್ಕೆ ಬರುವಂತಹದು. ಅವನು ಇದರ ನಾಲ್ಕೂ ಪದಗಳಲ್ಲಿ ಆದಿಪ್ರಾಸ ಮತ್ತು ಅಂತ್ಯಪ್ರಾಸ ಇಟ್ಟಿದ್ದಾನೆ. ಆದರೂ ಶಬ್ದಗಳ ಜೋಡಣೆಯಲ್ಲಿ ತನ್ನ ಶಬ್ದ ರಚನಾ ಸಾಮರ್ಥ್ಯವನ್ನು ಬಹು ಚನ್ನಾಗಿ ವ್ಯಕ್ತ ಮಾಡಿದ್ದಾನೆ. ಅವನ ಪ್ರತಿಯೊಂದು ನುಡಿಯಲ್ಲಿ ಅವನ ಭಾವವು ಸ್ಪಷ್ಟವಾಗಿ ಬಿಂಬಿತವಾಗಿರುತ್ತದೆ.

ಗುರುಬಸವ ಕವಿಯ ಮೂಲ ಗ್ರಾಮವು ಯಾವುದು, ಅವನು ಸಮಾಜದಲ್ಲಿ ಯಾವ ಸ್ಥಾನವನ್ನು ಹೊಂದಿದವನು , ಎಂಬುದು ತಿಳಿಯುವಂತಿಲ್ಲ. ಆದರೆ 'ಮತಸ್ಥಾಪನಾಚಾರ್ಯ' ಎಂಬ ಹೆಸರನ್ನು ತನ್ನ ಗ್ರಂಥದಲ್ಲಿ ಹಾಕಿಕೊಂಡಿರುವದರಿಂದ ಇವನು ಸಮಾಜದಲ್ಲಿ ಬಹುಮನ್ನಣೆಯನ್ನು ಹೊಂದಿದವನಾಗಿ ಉಚ್ಚ ಸ್ಥಾನವನ್ನು ಪಡೆದಿದ್ದನೆಂದು ನಾವು ಅನುಮಾನ ಮಾಡಬಹುದಾಗಿದೆ.

ಗುರುಬಸವ ಕವಿಯ ಈ ಗ್ರಂಥದ ಆವೃತ್ತಿಯನ್ನು ನಮಗೆ ದೊರೆತ ಎರಡು ಹಸ್ತಲಿಖಿತ ಗ್ರಂಥಗಳ ಸಹಾಯದಿಂದ ಸಿದ್ಧಪಡಿಸಿದ್ದೇವೆ. ಅವನ ಪಳು ಗ್ರಂಥಗಳನ್ನು ವಾಚಕರ ಸೌಕರ್ಯಕ್ಕೋಸ್ಕರ ಬೇರೆ ಬೇರೆಯಾಗಿ ಪ್ರಸಿದ್ಧಿಸುವದೇ ಹೆಚ್ಚಿಗೆ ಅನುಕೂಲವೆಂದು ನಮಗೆ ತೋರಿದ್ದರಿಂದ ಉಳಿದ ಕಾವ್ಯಗಳನ್ನು ನಾವು ಪ್ರಕಟ ಮಾಡುವ ವರೆಗೆ ಈ

ಗ್ರಂಥವನ್ನು ಹಾಗೆಯೇ ಇಡುವದರಿಂದ ಕಾಲ ವಿಳಂಬವಾಗುವದೆಂದು ಭಾವಿಸಿ ಈ ಗ್ರಂಥವನ್ನು ನಾವು ಈಗಳೇ ಪ್ರಕಾಶಪಡಿಸಿರುತ್ತೇವೆ.

ಇದರಲ್ಲಿರುವ ದೋಷಗಳನ್ನೂ ತಪ್ಪು ತಡೆಗಳನ್ನೂ ವಾಚಕರು ನಮಗೆ ತಿಳಿಸಿದಲ್ಲಿ, ನಾವು ಅವರಿಗೆ ಅತ್ಯಂತ ಕೃತಜ್ಞರಾಗುವೆವು. ಅವುಗಳನ್ನು ನಾವು ಮುಂದಿನ ಆವೃತ್ತಿಯಲ್ಲಿ ಸರಿಪಡಿಸಿಕೊಳ್ಳುವೆವು.

**ವಿಜಾಪುರ** **ಫ. ಗು. ಹಳಕಟ್ಟಿ**
೨-೭-೪೩ ಸಂಪಾದಕ

ಕವಿ ಗುರುಬಸವಕೃತ.

# ಅವಧೂತ ಗೀತೆ.

(ಚೌಪದಿ)

ಸ್ವಸ್ತಿ ಸಮಸ್ತ ಜಗಂ ನಿಜರೂಪ
ಭಕ್ತಮನೋಮಂದಿರ ಚಿದ್ದೀಪ
ನಿತ್ಯಂ ಗುರುಬಸವೇಶ ಪರಾಪ
ಕೂರ್ತೆನ್ನೊಳು ನೆಲಸಿರು ನಿರ್ಲೇಪ ॥೧॥

ಗುರು ಬಸವೇಶ ಸಮಗ್ರ ಪರೇಶ
ಶರಣ ಮನಸ್ಸರಸಿಉಹನಿವಾಸ
ಪರಮ ನಿರಂತರ ಸುಖಪರಿತೋಷ
ವರತರ ಸಲಹೆನ್ನನು ಭವನಾಶ ॥೨॥

ಸಹಜ ಸಮಗ್ರದ್ವಯ ಸುಖತುಷ್ಟಿ
ವಿಹಿತ ಷಡಂಗ ಶಿವಾಂಗಿಕ ಶಿಷ್ಟಿ
ಗಹನಕಡರಿ ಪರಸಮರಸ ಪುಷ್ಟಿ
ಯೆಹಗಿರಲಹಗನುಭವಗುರುದೃಷ್ಟಿ ॥೩॥

ಷಡಬ ಜಡಂ ಗುಣಮಹಿಸಂತಾನ
ಸುಡುವ ವಿಷಂ ಪೀಯೂಷ ಸಮಾನ
ಪೊಡೆವ ಸಿಡಿಲ್ಮಂಜುಳ ವರಗಾನ
ಮೃಡಗುರು ಕರುಣ ಕಟಾಕ್ಷದ ಭಾನ ॥೪॥

ಕಚಟ: ತಪೋಚ್ಚಾರಣೆಯನು ಮಾಡೆ
ವಿಚಲಿಸಲಹುದೆ ಸಮಗ್ರವ ಕೂಡೆ
ಉಚಿತ ರಹಸ್ಯವನಲ್ಲದನಾಡೆ
ಪ್ರಚುರವೆನಿಸಿ ಗಾದೆಗಳೊಳಗಾಡೆ ॥೫॥

ನೀ ಪರಮಾತ್ಮನಖಂಡಿತನಾಗಿ
ವ್ಯಾಪಿಸುತಿಹೆ ಮಿಥ್ಯಾಸುಖಕಾಗಿ
ಯ್ಯೆ ಪರಮ ಸುಧಾಂಬುಧಿ ತೃಷೆಗಾಗಿ
ಕೂಪೋದಕ ಪೀರ್ದುದು ಗಡ ಪೋಗಿ ॥೬॥

ಕರಣಾಲಯ ಸಜ್ಜನ ಗಡ ತನಗೆ
ಕಿರಣೋದಕ ಬಳಸಲು ಗಡ ಮನೆಗೆ
ಸ್ಮರಶಾಸ್ತ್ರಾನುಗ್ರಹ ಗಡ ಮುನಿಗೆ
ಸುರಧನುವಾಯುಧ ಗಡ ರಣಮೊನೆಗೆ ॥೭॥

ನಿನ್ನಾಯತ ನಿನಗನುಗುಣವಾಗಿ
ದುರ್ನೀತಿಯ ಬಿಡದಿಹೆ ನುಗ್ಗಾಗಿ
ಬನ್ನ ಬಟ್ಟು ಜೀವಿಸುವಂತಾಗಿ
ಮನ್ನಿಸುವನೆ ಯಮರಾಟ್ ನಿನಗಾಗಿ ॥೮॥

ತಳುವದೆ ಸಲೆಸಂಸೃತಿಯನು ಪಳಿಯೆ
ಹೊಳೆವುದು ತನುಸಂಸೃತಿಯದನಳಿಯೆ
ಉಳಿದ ಮನಸಂಸೃತಿಯದ ಕಳೆಯೆ
ಬೆಳಗುತಿಹನು ಪರಮನು ಸಂದಳಿಯೆ ॥೯॥

ಉಗ್ಗರಿಸುತಲಾಹುತಿಗೊಳುವಂತೆ
ನುಗ್ಗಾಗಿಯು ಬಿಡೆ ವಿಷಯವ ಮುಂತೆ
ಹಿಗ್ಗುವೆ ನೀ ತೋರಿಕೆಗೋರಂತೆ
ತಗ್ಗುವೆ ತತ್‌ಕ್ಷಣದೊಳಗಂತಂತೆ ॥೧೦॥

ನೀನೊರ್ವನು ಹಲಬರ ಹೋರಾಟ
ಜ್ಞಾನೋತ್ತರಮಾರ್ಗಕೆ ಜಂಜಾಟ
ವಾನರಕೊದಗಿದ ತೊನಜಿಯ ಕಾಟ
ತಾನದರಿಂ ದಿನದಿನ ಕುಚ್ಚಾಟ ॥೧೧॥

ಅದಕಿದು ನೀಚವಿದಕ್ಕದು ನೀಚ
ತುದಿಗೈದಿಸಲದಕದು ಸಂಕೋಚ
ಹದನಿದು ತಿಳಿ ಸಂಸೃತಿನಾರಾಚ
ವಿಧಿ ಗಹಗಹಿಸಲು ಸುಖವೆ ವಿಮೋಚ ॥೧೨॥



ಆಯುವಿಹುದು ಕಾಲಾಖ್ಯನ ತಾಳಿ
ಹಾಯೆನುತಿಹೆ ತಿಥಿವಾರವ ಕೇಳಿ
ದಾಯಗೆಡಲು ತಿಳಿಯದೆ ಮತಿಹೋಳಿ
ವಾಯಕೆ ಸುಖಸುತ್ತಿಹೆ ಕಾಕೋಳಿ ॥೧೩॥

ಶುನಿಮಸ್ತಕ ಮಕ್ಷುಕ ರತಿಯಾಗಿ
ವಿನಯದಿ ಪಿಡಿಯಲದುಂ ಕನಸಾಗಿ
ತನು ಸಂಸೃತಿಗುಪಮಾನಮದಾಗಿ
ಕನಲದಿರದಕೆ ಜಡಾತ್ಮಕನಾಗಿ ॥೧೪॥

ಕನಸಿನೊಳಗೆ ಸಂಸಾರದ ಸಂಗ
ಕನಸಿಂದೆಚ್ಚರೆ ಬಿಡುಗದರಂಗ
ನೆನೆದಡೆ ಭವಸಾಗರದುತ್ತುಂಗ
ತನುಪೂರ್ವಕವಾದೊಡೆ ಸುಖಭಂಗ ॥೧೫॥

ತೋರಿಕೆ ಮಾತ್ರವೆನಿಪ ಸಂಸೃತಿಯು
ಮೀರದೆ ಬಹು ಕಂಟಕ ಸಂದಣಿಯು
ಹೆರುಹತನುಕರಣೇಂದ್ರಿಯವಳಿಯು
ನೆರೆದವಂ ಸುಖದಿಂದಿರಲರಿಯು ॥೧೬॥

ಎಹಗಹುದ್ಯೆ ವೈಭವ ಈಷಣದ
ಕುಹಕದನಾರ್ಬಲ್ಲರು ಸಿರಿಗರದ
ಆಹಹ ವೃಥಾ ಮೋಹಿಸಿ ಸಂಶಯದ
ಸಿಹಿಗೆಳತಟಗೊಳುವರೆ ಕೃತ್ರಿಮದ ॥೧೭॥

ಭವಣೆಯ ಮೇಲೆ ಬಳಾರಿಯ ತೂಳ
ಹವಣಿಸಿದಂತೆ ಶರೀರದ ಮೇಳ
ತವೆ ಸಂಸೃತಿ ಬಹು ಕರ್ಮದ ಕೋಳ
ಶಿವಶಿವ ತನುವಾಯಿತಿಂತುರಿದೇಳ ॥೧೮॥

ಅನವರತಂ ಗುರುಚರಣವ ಕೂರ್ತು
ನೆನೆಯದಿರಲು ಕಾಲಂಗವ ತುತ್ತು
ತನುಕರ್ಮವ ತನುವಿಂಗುಣಲಿತ್ತು
ತನಗೆ ದಿನಂಗಳಿವುದು ತಾ ಹೊತ್ತು ೧೯

ತಟತಟ ತಾನೆನಿಸುವ ಸಂಸಾರ
ಘಟಿಸಿ ವಿಜೃಂಭಿಸುತಿಹ ಭವಭಾರ
ದಿಟವುಸಿಗಳ ಮಧ್ಯದ ಕುವಿಚಾರ
ನಟಿಸಿದನವಗೆ ತನು ನೆರೆ ನಿರ್ಧಾರ ॥೨೦॥

ಹಸುಗಳೆಯದೆ ಸೊಣಗನು ಮತಿಗೆಟ್ಟು
ಮುಸುರೆಯ ಮಡಿಕೆಯೊಳಗೆ ಮೊಗವಿಟ್ಟು
ದೆಸೆಗಾಣದೆ ಬಾಧೆಗೆ ತನುಗೊಟ್ಟು
ಪೆಸರ್ಗೊಳಲಿದು ಸಂಸಾರದ ಗುಟ್ಟು ॥೨೧॥

ಎನಿತರುವಿರಲಹವೆನುತಿಹ ಖಳನು
ಮನುಜನೆಯುವ ಸಾಕ್ಷಾನ್ನರಖರನು
ಜನರೊಳಗವನೊರ್ವನೆ ಪಾತಕನು
ತನುಭೇದದೊಲನ್ನವ ತಿನುತಿಹನು ॥೨೨॥

ತನು ಸವೆಸವೆದು ಮನಃಕವಲಿರಿದು
ದಿನಚರಿಯದ ಕೋಟಲೆಯೊಳಗೊಡದು
ಜಿನುಗುತ್ತಿಹನಜ್ಞನು ಕುದಿಕುದಿದು
ಕನಸಿನ ತೋರಿಕೆಯಂ ನೆನೆನೆನೆದು ॥೨೩॥

ಮನುಜನ ಮತಿಯೊಳಗಿಲ್ಲ ವಿರಕ್ತಿ
ಇನಿತುಳ್ಳೊಡೆ ಹೊರಗಿಹುದದು ಹತ್ತಿ
ಜಿನುಗುತಿಹುದು ಮನದೊಳು ದುರ್ವರ್ತಿ
ಜನಿಸುತಿಹುದು ಪರದೊಳು ದುಃಕೀರ್ತಿ ॥೨೪॥

ಪರಿಮಳ ಕಾವ್ಯರಸಂ ರುಚಿಗಾನ
ಸುರುಚಿರಲಾಸ್ಯಸುಪುಷ್ಪವಿಧಾನ
ಪರಿಕಿಸಲಿವರನು ಸಂಗದಿ ದಿನ
ಪರಿಹಕದಿನ ಭಕದಿಂದವನೂನ ॥೨೫॥

ಜಡ ಭೌತಿಕ ದೇಹೇಂದ್ರಿಯದಾಟ
ಬಿಡೆ ಸಂಸಾರವಿಷಯದೊಳಗೂಟ
ಷಡರಿವಿಕಾರ ಗುಣಂಗಳ ನೋಟ
ತಡೆಯದೆ ನಿರಯಾವಧಿ ನಿಟ್ಟೋಟ ॥೨೬॥



ತಟತಟ ತನುತಾಪದಿನುದರಾರ್ಥಂ
ಕಟಿಪಟಿ ವಚನ ವೃಥಾ ವಾದಾರ್ಥಂ
ಚಿಟಿಪಿಟಿ ಮನಸಿನಿಸುಂ ಲೋಭಾರ್ಥಂ
ದಿಟದಿಟ ಮುಕ್ತಿಗೆಮೋಹಗದು ಸ್ವಾರ್ಥಂ ॥೨೭॥

ಅನೃತವಹ ಗೃಹದೊಳು ತಪದಾಟ
ಮನಕನುಗುಣವಾಗದು ಹಾರಾಟ
ತನಗಿನಿತರ ತಾತ್ಪರ್ಯದ ಮಾಟ
ಇನಿಸಾದೊಡೆ ನೆಲೆಯಂ ಬಿಟ್ಟಾಟ ॥೨೮॥

ತಟತಟಯಹ ಲಾಲಸೆಯನು ಸೂಡಿ
ಪಟಪಟನೈದಿ ಪರರ ತಾ ಬೇಡಿ
ದಿಟದುಸಿಗಳ ಮನದೊಳಗೆಡೆಮಾಡಿ
ಕಟ ಮನುಜರು ಬಳಲ್ವರು ಸುಖಕಾಡಿ ॥೨೯॥

ಸಿಡಿಲೆರಗಿದ ಪರಿಯಂತಾರ್ಭಡಿಸಿ
ಕೊಡಹುತ ಗಾದೆಗಳಂ ಗಡಬಡಿಸಿ
ನುಡಿನಡೆಯೊಳು ಮದಮತ್ಸರ ಜನಿಸಿ
ಘುಡುಘುಡಿಸುವನಜ್ಞನು ಭವವೆರಸಿ ॥೩೦॥

ಮನಪಿದು ತನುವಿನುಪಾಧಿಕವಾಗಿ
ತನುವಿಷಯೇಂದ್ರಿಯಗಳಿಗತಿ ಬೀಗಿ
ದಿನದಿನ ವಿಷಯೋಪಾಧಿಕವಾಗಿ
ತನಗೆ ಭವಂಗರವವು ತಾವು ಕೂಗಿ ॥೩೧॥

ಮನಕನುಗುಣವಾಗದು ನೆನೆದಂತೆ
ತನುವಿಷಯದ ಬಗೆಗಳು ತಾವು ಸಂತೆ
ತನಗಿದರಿಂ ಸುಖವಿರದೋರಂತೆ
ಜನನಲಯಸ್ಥಿತಿಗಳು ತಾವು ಮುಂತೆ ॥೩೨॥

ಅವತರಿಸಿಯೆ ಹಸುತೃಷೆ ಸಮವಾಗಿ
ತವೆ ಸತಿ ಸುತರನುರಾಗಕೆ ಬೀಗಿ
ಭವಣಿಬಡುವನಿಹಕರಗಳಿಗಾಗಿ
ಭವಬಡುವರು ಮನುಜರು ಸುಖಕಾಗಿ ॥೩೩॥

ಎಲೆಯುಲುಗಲು ತರತರಿಸುವ ನರನು
ಗೆಲುವನದೆಂತು ಮಹಾ ಸಮರವನು
ನಿಲಹಿಡಿಯದೆ ಮನಸಿಗೆ ಬೆದರಿಹನು
ಸುಲಭದಿತ ಪವನದೆಂತಾನುವನು ||೪

ಎಲೆಲೆ ಮನಸ್ಥಿರಕರಪರವಾಗಿ
ಅಲುಗಲದೆಂಬಂಧನವಹುದಾಗಿ
ಹಲವೆಣಿಕೆಯ ಮಾಡುವೆ ಸುಖಕಾಗಿ
ಸಲೆ ಗುರುವಚನದ ಬಲುಹುಂಟಾಗಿ ||೫

ಮನವಿದು ನೆನೆದಂತಾಚರಿಸುವನು
ತನು ತಾನೆಂದುಳುಮೆಯ ಮರೆದವನು
ತನಗಿತರವ ಕಲ್ಪಿಸಿ ಬರಿದಹನು
ಜನಿಮೃತಿಗಳಿಗಂಗವ ಕೊಟ್ಟವನು ||೬

ಅದುಕಾರಣ ವಿಷಯೇಂದ್ರಿಯಗಳನು
ಬೆದರಿಸಿ ಗುರುಚರಣದ ಸಂಗವನು
ಮುದವದಿರದೆ ಮಾಡುತ ಭವಗಳನು
ಸದೆಬಡೆದವುಲಾತ್ಮನ ಕೂಡಿದನು ||೭

ಮನವಿದು ಸಯ್ಯಮದಿಂ ಪೀಯೂಷ
ಬಿನಯವ ಮಾಡಲದೆಂ ಭವನಾಶ
ತನಗೊದವಿದ ಮನದಿಂದುದ್ದೇಶ
ಜನಿಸದಿರಲು ತನಗತಿ ಪರಿತೋಷ ||೮

ಕ್ಷಿತಿಯೊಳಗತಿ ಮತದಿಂ ಮಿಗೆ ಕೂಡಿ
ಹಿತವಂತರನರಸುತ್ತಿಹ ಪೀಡೆ
ವ್ರತಭಾವನೆ ಮನದಿಂದೆದ್ದೋಡೆ
ಹಿತವರಹಾ ಸರ್ವರುಮಂ ಕೂಡೆ ||೯

ಬೇಸರದೆ ನುಡಿವಂವದಿಯೆಂದು
ಈಸಾಡುವೆ ಸಂಸಾರದೊಳೆಂದು



ಕಸುಂದಿಂ ಭವಭವದೊಳು ಬಂದು
ಹೇಸಲು ಬೇಕದರಿಂ ನೀನೊಂದು ||೧೦||

ಸಾವಿರ ಶತದೋಷಂಗಳೊಳಿಡಿದು
ಭಾವಿಸಲೊಂದು ಮಹಾಗುಣವಿಹುದು
ಆವವನೇಹಗಾಚರಿಸುವನೊಲಿದು
ತಾ ವಿಹರಿಸುತಿಪ್ಪುದು ತನು ಮಣಿದು ||೧೧||

ಹಸು ತೃಷೆ ಸಂಸಾರಿಕ ವೇಷವನು
ಬಿಸುಡುತ ದಿಗ್ವಿಜಯವ ಮಾಡಿದನು
ವಿಷಮ ಭವಾಟವಿಯೊಳಗಾಗಿರನು
ವಸವಾಗಿರುತಿರುವಾತ್ಮನೊಳತನು ||೧೨||

ಪರಮಾಣುಕತನದಿಂ ತನು ಮುನ್ನ
ಬೆರಸಿಹ ಕಥದಿಂದಲು ಕೇಳಿನ್ನ
ಹೊರಿಯದಿರಲು ವಿಷಯಗಳಿಂತೆನ್ನ
ವರ ಮುಕುತಿಯನೀವುದು ದಿಟ ಚೆನ್ನ ||೧೩||

ಇದರಿಂದೀ ತನುವನು ಲಾಲಸದಿಂ
ಸದೆಬಡೆಯದೆ ಗುರುಮತಸಯ್ಯಮದಿಂ ॥
ಪದುಳದಿ ಸಲಕದಿರಲು ಸಂತಸದಿಂ ।
ತುದಿಗೀವುದು ನಿನಗಾತ್ಮನ ಭರದಿಂ ||೧೪||

ತನು ತಾನ ತನುವಹುದು ಗುರುವಿಂದ
ಜನಿಮೃತಿಗಳು ಕೇಳ್ವೊಗುವವಸಿಂದ
ತನಗೆ ಚಿದದ್ವಯ ಸುಖವದರಿಂದ
ನೆನೆ ಗುರುಬಸವೇಶನನೆಲೆ ಕಂದ ||೧೫||

ತಲೆಗರಸಿಕ್ಕಿತಬಲು ಹೊರೆ ಬಂದು
ಗೆಲವಾವುದು ತಾಂ ಚರಿಸಲಿಕಿಂದು
ಸಲೆ ಕೃತ ದುಃಕೃತಚಿಂತೆಗೆ ಸಂದು
ಫಲವಾವುದು ನಿರ್ಗುಣ ನಿನಗೊಂದು ||೧೬||

ಗ್ರಂಥಾಲಯ

ತ್ಯಾಗಾಂಗದ ಫಲದಿಂ ನಿರಯವನು
ನೀಗಿ ನಿಜಾನ್ವಯಸಹಗುರುಪರನು
ಯಾಗಸಹಸ್ರೋತ್ತರ ಪದವಿಯನು
ಭೋಗಿಸಿ ತಾಂ ನಿಜಸುಖಿಯಾಗಿಹನು

ಅವರವರಿಗೆ ತನು ತಕ್ಕಂತಾಗಿ
ವಿವರಿಸಿ ಕರ್ಮವದಕೆ ಸಮವಾಗಿ
ತವೆ ಸುಖದುಃಖ ತನಗೆ ನೆಲೆಯಾಗಿ
ಭವಬಿಡದಾತ್ಮವಿವೇಕವ ನೀಗಿ

ಸಮಗುರುಪದಚಿಂತನದೊಳು ನಿರುತ
ಬೆದರುವನೆ ಕರಣಾಖ್ಯಕೆ ನಿರತ
ಪದುಳದಿ ಮುದವದಿರದ ನಿಶ್ಚಲಿತ
ಮದಗಜದಂತಿರಬೇಕವಧೂತ

ಇಹಪರದೊಳಗಿಹದಿಂ ಪರವಧಿಕ
ಇಹ ತಾಂ ಪರಕೋಸುಗ ಸಂಗ್ರಹಿಕ
ವಿಹಿತವಿದಿಹ ಪರಗಳ ಮಾಮಸಕ
ಗ್ರಹಿಸದಿರಲು ಭವಭಯಕವ ನಿಲುಕ
ಕಳನೊಳು ಮನೆಗಟ್ಟಿಹ ಪಟುಭಟನು
ಹೊಳಹಿಲ್ಲದ ಚಿತ್ತವನುಳ್ಳವನು
ನೆಲನೆಲ್ಲವ ಸಂಚರಿಸಿದನವನು
ಸುಲಭದಿ ಶಿವನೊಲವಿಂಗೊಳಗಹನು ॥೩

ತವೆ ತನುಸಿದ್ಧಿ ತನಗೆ ಬೇಕೆಂದು
ಹವಣಿಸಲೇಕೌಷಧಿಗಳನಿಂದು
ಶಿವಶಿವಯೆಂದುಚ್ಚರಿಸಲಿಕೆಂದು
ಭವಭವದೊಳು ತನುವಿರುತಿಹುದೊಂದು ॥೩.

ಷಡರಿ ವಿಕಾರ ಗುಣಭ್ರಮೆಗಳನು
ಕೊಡಹುತ ದಿಗ್ವಿಜಯವ ಮಾಡಿದನು
ಕಡೆಗೆ ಮುಮುಕ್ಷುವೆನಿಸಿ ಮುಕುತಿಯನು
ಪಡೆದು ಪರಮಾತ್ಮನೊಳಗೆ ಸುಖಿಯಹನು ॥೩೩



ಶರೀರವಿದುಂ ಭವರುಜೆ ನೀನರಿಯೆ
ವರ ವೈದ್ಯವ ಬಯಸುವೆ ನರಗುರಿಯೆ
ಪರಮೌಷಧಿ ಭಸಿತವ ನೀ ಮರೆಯೆ
ಹರನೊಲವಿಲ್ಲದರಿಂ ನೀನುರಿಯೆ ॥೩೪॥

ವಿಧಿಕೃತ ದುಃಕೃತವೆಂಬಿವ ಸುಟ್ಟು
ಸದಸದ್ವಸ್ತುವಿವೇಕವ ತೊಟ್ಟು
ಸದಮಲಗುರುವಚನವ ಬೈಚಿಟ್ಟು
ಬೆದರನು ತಾಂ ಮನಸಿಗೆ ಕಂಗೆಟ್ಟು ॥೩೫।

ಪ್ರಕಟಿಸಿ ವಿಧಿಲಿಖಿತವನೊಡೆದುಳಿದು
ಸಕುಟಿಲ ಸಂಸಾರವ ಸದೆಬಡಿದು
ಪ್ರಕೃತಿವಿಕಾರಂಗಳ ಕೊಡಹಿದುದು
ಸ್ವಕಳಿತವೆನಿಪವಧೂತತ್ವವಿದು ॥೩೬॥

ನಾನಾ ವಿಧವವಧೂತನ ಚಿನ್ಹ
ಏನೆಂದರಿಯಲುಬಾರದು ತನ್ನ
ಜ್ಞಾನೋತ್ತರ ವಿವರಣೆಯೊಳಭಿನ್ನ
ಸಾನಂದವೆ ತಾನಾಗಿಹ ಚಿನ್ನ ॥೩೭॥

ಅಧಿಕರೊಳತ್ಯಧಿಕನು ಅವಧೂತ
ಸದಸಿಕೊಳಸು ಯಮಗಿಮ ನಿಂದಾತ
ಬೆದರನು ಹಸುತೃಷೆಗಳಿಗತಿನೀತಾ
ಮದಲಾಲಸಗತ ಶಿವಕರಜಾತ ॥೩೮॥

ಕಟಿಪಟಿಮಕ್ಷಕ ಟಂಕಟಿದೇಹ
ದಿಟಪುಟವಿಹಪರಸುಖ ನಿರ್ಮೋಹ
ಪಟುತರ ಗುರುಸಂಯಮಸಂದೋಹ
ಮಟಮಟಸದೆ ಮಾಸದ ಸನ್ನಾಹ ॥೩೯॥

ಜಡೆಮುಡಿಮುಂಡನಚಿನ್ಹಗಳಿಂದ
ವ್ಮಡ ತಾಂ ಗುರುರೂಪಾದುದರಿಂದ

ಒಡಲೂಟವನಳಿದಿಹನನುವಿಂದ
ಒಡವೆರದಿಹ ಪರಮನೊಳೊಲವಿಂದ ॥೧

ನಸುಭಸಿತೋದ್ಧೂಳನವನು ಮಾಡಿ
ಕೃಸ ಗಾತ್ರವ ಸಂಯಮದೊಳು ಕೂಡಿ
ಶ್ವಸನನನಂಬರದೊಳಗೆಡೆಮಾಡಿ
ಹಸನಾಗಿಹನಮಲಾತ್ಮನ ಕೂಡಿ ॥೧

ಸ್ಥಾವರಜಂಗಮದೊಳಗೇನೊಂದ
ಬಿವಸಗೊಳಿಸನಲಾತಂ ನಿಂದ
ಜೀವೇಶ್ವರ ಸಂದಳಿದುದರಿಂದ
ಭಾವಾತೀತನೆನಿಪನದರಿಂದ ॥೧

ಅರುನೆಲೆ ಕರುವಾಡದೊಳಹನೊಲಿದು
ಗಿರಿಗುಹೆವನದೊಳಹ ಸುಖದಳಿದು
ಹರುಷವಿಷಾದಂಗಳನತಿಗಳೆದು
ಚರಿಸುವನಭವಂಘ್ರಿಯ ದೃಢವಿಡಿದು ॥೧

ಉರು ಬಿಮರುನ್ಮುಖದಿಂ ದಂಡವನು
ಕೊರೆದು ಸಿಳೀಮುಖದಿಂತಗ್ನಿಯನು
ತರುಬುತಲಾಕಾಶಕೆ ಪಾಯಿಸಿದನು
ತೆರಹುಗುಡುತ ಗುರುಶರಣೆನುತಿಹನು ॥೧

ಉಚ್ಚಳಿಸಿಯೆ ಮರುತನನಂಬರದ
ಮುಚ್ಚಳವಂ ಸಡಿಲಿಸಿ ಮಣಿಸರದ
ನಿಚ್ಚಣಿಗೆಯನಡರಿಯೆ ಕಂಧರದ
ಚೆಚ್ಚರದಿಂ ಗುರುವಿಹ ವರಕರದ ॥೧

ಚತುರ್ದಳಕಾಂಚನಮಂ ನೆರೆ ಬಿಡದೆ
ಪಿತೃಪತಿಗೆ ನಿಜದೇಹವ ಕುಡದೆ
ಪ್ರತಿಬಿಂಬದ ಪರಿಯಂತುಸುರಿಡದೆ
ಕ್ಷಿತಿಯೊಳು ಚರಿಸುತ್ತಿಹನನುಗೆಡದೆ ॥೧



ಭಾಳದೊಳಮಳವಿಭೂತಿಯ ಭಾನ
ನಾಲಗೆಯೊಳು ನಾಮಾಮೃತಪಾನ
ಮೇಲುಶಿಖರದೊಳಗಭವನ ಧ್ಯಾನ
ಮೂಲಾಧಾರಬಲಾಢ್ಯವಹೀನ ॥೧೭॥

ಅವರವರೊಳಗಿಹನವರವರಂತೆ
ವಿವರಿಸಿ ನೋಡಲು ತಾಂ ತನ್ನಂತೆ
ರವಿಗಗಣಾಂಗಣದೊಳು ನಡೆವಂತೆ
ಭವವಿರಹಿತನಾದನು ಓರಂತೆ ॥೧೮॥

ಭಸಿತಕರಂಡಕಮಂಡಲುದಂಡ
ಪಸರಿಸದಜಿನಹರಾಕ್ಷರತಂಡ
ಸ್ವಸನಮನೋಜಯನಾಗಿಹ ಕಂಡ
ಮಸುಳಿಸದಿಹ ಸದ್ಗುರುಪಿಂಡ ॥೧೯॥

ಅತಿ ಪಟುಮತಿ ಹಟಮತಿ ದಿಟಮುದಿತ
ಕೃತಿಹಿತಮತಿಸಾತ್ವಿಕ ಗುಣನಿರುತ
ಮತಿಮಥನಾಗ್ನಿಕಳಾಪ್ರಭೆಭರಿತ
ಶೃತಿವಿಘಟನತಾಂತ್ರಿ ಜಗದ್ವಿನುತ ॥೨೦॥

ಅಕಪಟದಿಂದವಧೂತನೆ ಮುಖ್ಯ
ಅಕಪಟವೆನೆ ಸಾಕ್ಷಾನ್ನಿಜದಾಖ್ಯ
ಸಕಳಿತ ನಿಜವೆಂದೆನೆ ಪರಮೈಕ್ಯ
ವಿಕಸಿತದೈಕ್ಯವೆನಲು ತತ್ಸೌಖ್ಯ ॥೨೧॥

ನಟಭಟರಂತೆ ವಿನೋದವ ಮಾಡಿ
ನಟಿಸುವ ತಾಂ ಲೌಕಿಕರೊಡಗೂಡಿ
ಸಟಿ ಜನವನು ಸೋಂಕಲು ನಡುವಾಡಿ
ಮಠದೊಳಗಿಹನಭವಾತ್ಮನ ಕೂಡಿ ॥೨೨॥

ಶಿರದೊಳಗಿರದಡಸಿದ ಶಿವಲಿಂಗ
ಉರದೊಳು ಬೆಳಗುವ ಮಂತ್ರದ ಸಂಗ

ಶರೀರದೊಳವಭಾಸಿತ ಭಸಿತಾಂಗ
ಗುರುಮತವಿದರಿಂದವೆ ಶುಭದಂಗ ॥೬೩॥

ಪ್ರಭೆ ಮುಸುಕಿದ ಮಸ್ತಕದಿಂ ಮೇಲೆ
ನಭಸಿ ವಿಯದ್ಗಂಗಾಜಲತಲೆ
ವಿಬುಧವಿಶಿಷ್ಟಕದಂಬಕಸೋಲೆ
ವಿಭವವದಂ ಶರಣಂಗದು ಲೀಲೆ ॥೬೪॥

ಹರನೊಲವಿನ ಕರುಣಾಮೃತಸಿಂಧು
ತೆರೆ ಮಸಗುತ ತನ್ನೊಳಗಿರಲಂದು
ಹೊರೆಯಿಲ್ಲದೆ ಸರ್ವರು ಜಯಯೆಂದು
ಭರವಸದಿಂ ಭಜಿಸುವರಿದಿರ್ವಂದು ॥೬೫॥

ಜಗಜಗಿಸುವ ತೇಜಸ್ತಂಭವನು
ಬಗೆಮಾಡುತ ನೆರೆ ಕಂಡ ವನಜನು
ಹಗಲಿರುಳಿನ ಹಂಗಳಿದುಳಿದಿಹನು
ಗಗನಾಂತರನಾಗಿಹ ಸುಖಕರನು ॥೬೬॥

ಶಿವಪೂಜೆಯನಾಗಳು ಮುದದಿಂದ
ಹವಣಿಸುತಿಹುದನುಭವದೊಲವಿಂದ
ನೆವವಿಲ್ಲದೆ ಪೇಳಿದೆನೆಲೆ ಕಂದ
ತವೆ ಸುಖಿಗಳು ಕೇಳ್ವಾವದರಿಂದ ॥೬೭॥

ಮಿಗೆ ಮಾನಸಪೂಜನದಿಂ ಮಗನೆ
ಜಗದೊಳಗಾವು ಬಾಳ್ವೆವು ಭಲಭಲನೆ
ಬೆಗಲಡದೆಂ ಶಿವಪೂಜೆಯ ಸಸಿನೆ
ಸೊಗಸಳಿಯದೆ ಮಾಡುವುದೊಡನೊಡನೆ ॥೬೮॥

ಮನದೊಳು ಶಿವಪೂಜನಮಂ ಬಿಟ್ಟು
ಮನುಜನ ಹೋ ತನ್ನಿಂ ತಾಂ ಕೆಟ್ಟು
ತನುಭವಿಯವ ಜಗದೊಳು ಕರಕಟ್ಟು
ಜನಿಮೃತಿಗಳಿಗಂಗವಮುಂ ಕೊಟ್ಟು ॥೬೯॥



ಹಂದುದ ಗಂಟಕ್ಕಿದಡದು ತಿರುಗಿ
ಕಿರಿದಲ್ಲದೆ ಹಿರಿದಾಗದು ನಲುಗಿ
ಮರಮರದರಿಯಲು ಬುದ್ಧತೆಯೊದಗಿ
ನೆರೆ ಸುಖವಿಲ್ಲ ವಿಮರುಶನಕೊದಗಿ ॥೭೦॥

ಮಣಿಮಂತ್ರೌಷಧಿಗಳ ಬಲವಲ್ಲ
ವಣಿಜತೆ ಕೃಪೆಯಾಚಕ ತನಗಿಲ್ಲ
ತೃಣಕೆಣೆಯುವಗೆ ವಿಭೂತಿಗಳೆಲ್ಲ
ತ್ರಿಣಯಘಖಂಡಿತನೆಂಬುದ ಬಲ್ಲ ॥೭೧॥

ಇವನವನೆಂದೆನ್ನದ ನಿಲುಕಡೆಯು
ಹವಣಿಸಿ ಸಮ್ಯಕ್ಖಂಡಿತ ಸಿರಿಯು
ಶಿವನೊಲವಿಂದನುಭವಿಸುವ ಶಶಿಯು
ಭವನದೊಳಿಹನಮೃತದ ಹರವರಿಯು ॥೭೨॥

ಭವಹರ ನಿನ್ನ ಸಮಾರಾಧಿಸುತ
ಭವಿಯಹನೆಂತದು ಹೋಗಲಿ ಪುರತ
ಶಿವಶಿವ ತಚ್ಚರಣದೊಳನವರತ
ವಿವಸನದಿಂ ಧನ್ಯನೊ ಗತದುರಿತ ॥೭೩॥

ಎನಿತೆಸೆಯಲು ಸರವದುಗುರಿ ನಡೆದು
ಜನಿಸುಗುದೆಂತು ಸುಖಂ ಕರ ಜಡಿದು
ನೆನಹಭವನ ಮುಟ್ಟದು ಹರಿಹರಿದು
ತನಗಮೃತಂ ಭವಿಸುವುದೆಂತೊಸೆದು ॥೭೪॥

ಗುರಿಗೈದದ ಸರಮಂ ಪಶುಪತಿಯ
ತರುಬದ ಮಾನಸವಂ ಭವವಿಧಿಯ
ಹರಿಯದ ಸಂಗತಿಯಂ ನಿಜ ಸುಧೆಯ
ಸುರಿಯದ ನಾಲಗೆಯಂ ಸುಡು ನಿಡೆಯ ॥೭೫॥

ಅರಿವೆನಲುಳುಮೆಯದೆಂ ನಿರ್ಗುಣದ
ಕುರುಹೆನಿಸಿಹ ಕಥದಿಂ ಕೇಳ್ವಿಜದ

ಅರಿವುಳ್ಳವನನುಗೆಡಿಸಿಹ ಪರದ
ಸೆರೆಯಾಗಲು ಬಲುಹಿಂ ಗುರುಪದದ ||೫೬||

ಕಡನರಿವಿಂ ಕಲ್ಮಶದಿಭದೊಡಲು
ಸಿಡಿಯುನೆ ಬಹು ವ್ಯಸನಕೆ ತನುಗೊಡಲು
ಒಡೆವುದೆ ಭವಲಿಖಿತಂ ರುಜೆ ಬರಲು
ತಡೆಯುದೆ ಸುಖ ಬಹುದೇ ನಿಜಗೊಳಲು ||೫೭||

ಇತರೇತರ ಕುಳಕದಿ ಭವ ಸೃಷ್ಟಿ
ಸ್ಥಿತಿಲಯಗಳ ತೋರುವುದದು ಪುಷ್ಟಿ
ಮತಿಗೆಡೆದಭವನೊಳಗೆ ಮನಮುಟ್ಟಿ
ಪ್ರತಿ ವಿರಹಿತನಹನೇ ಜಗಜಟ್ಟಿ ||೫೮||

ನಿರುಪಾಧಿಕ ಸೇವಕರುಗಳಾಗಿ
ಕರಪದಗಾವಾಕ್ಕುಗಳಿರಲಾಗಿ
ತರಹರ ವಿಮಳಕ್ಷಮರುಗಳಾಗಿ
ಶರಿರದೊಳಿರಬಹುದೇ ತನು ಬೇಗಿ ||೫೯||

ಹಲವಂಗದ ಕೋಟಲೆಯನು ಮಾಡಿ
ತೊಲಗದೆ ವಾಗಾದಿಗಳಿವೆ ನೋಡಿ
ಗೆಲಬಹುದಲ್ಲದಿವಂ ಹೋಗಾಡಿ
ನಿಲಬಹುದೇ ತನುವಂ ತಾ ಕೂಡಿ ||೬೦||

ಶಿವನೊಲವ ಹರಿವಿಭೇದವನಿಗು
ನೆವವಂ ಬಿಡು ಚಿಂತೆಗೆ ಹೊರಗಾಗು
ತವಕಿಸದಿರು ಗುರುಮತದೊಳು ಬೇಗು
ಭವಹರಿದಿದರಿಂದವೆ ಸುಖಿಯಾಗು ||೬೧||

ತನಗಿಹದೊಳು ಫಲಪದವಿಯ ಕರ್ಮ
ತನುಗತವಹುದೀ ತೆರದೊಳದು ಗುಮ್ಮ
ವಿನಯುವಿಮುಖಪರಿಚಾರಕ ಧರ್ಮ
ನಿನಗೊಲವಿಂ ಪೇಳಿದೆನಿದು ಮರ್ಮ ||೬೨||



ರೂಪದುಪೇಕ್ಷಿಸಿ ಮನದೊಳು ಸಲುವ
ಗೋಪಾಳಿಕೆಯಿಂ ನೋಡಲು ಜಗವ
ವ್ಯಾಪಕ ಶಿವನೊರ್ವನೆ ದಿಟ ಮಿಗುವ
ಸೋಪಾಯದಿ ತಿಳಿಯಲು ತಾನುಳಿವ ||೬೩||

ಶಮೆದಮೆಶಾಂತಿತಿತಿಕ್ಷೆಗಳಿಂದ
ಕ್ರಮವಿದು ನಾಂ ಚರಿಸುವ ನಲವಿಂದ
ವಿಮಳಾತ್ಮನ ಕೂಡಿಹನನುವಿಂದ
ಸಮವಿರಹಿತನಾಗಿಹುದದರಿಂದ ||೬೪||

ತಥಶಿಥಿಸರಮಾತಾಯುಸಮೇತ
ಪ್ರತಿಯುಹ ಚತುರ್ವಿಂಶಕ ಸಂಗಾತ
ಸ್ಥಿತಿಯುದರಿಂ ತಾನಾತ್ಮನತೀತ
ಶೃತಿಸಾಕ್ಷಿಕನಾಗಿಹ ಶಿವಜಾತ ||೬೫||

ನರ್ತಿಸುತಿಹ ಮಣಿಮಯದೀಪಕದ
ಪುತ್ಥಳಿಯನು ಕಂಡವನೊಳು ನುಡಿದ
ಮರ್ತ್ಯನಮರ್ತ್ಯನೆನಿಸಿ ನಿಜಸುಖದ
ತಥ್ಯವೆ ತಾನಾಗಿಹನನುಭವದ ||೬೬||

ನೀನಭವನ ಬಿಡದಿಹ ಪರಿ ನಿನ್ನ
ತಾನಭವಂ ಬೆಂಬಿಡ ಕೇಳ್ಮನ್ನ
ಹಾನಿ ಹೊಗದು ತನಗಖಿಳವಭಿನ್ನ
ಜ್ಞಾನದ್ವಯವಾಗಿಹುದದು ಚಿನ್ನ ||೬೭||

ಜಗವಿದು ಶಿವನಾಜ್ಞಾಗುಣದಿಂದ
ಬಿಗಿದನು ವಶವಾಗಿಹುದದರಿಂದ
ಮಿಗೆ ಶಿವ ತನ್ನೊಳಗಿರೆ ನಲವಿಂದ
ಬೆಗಡದೆ ಜಗವರ್ಚಿಪುದದರಿಂದ ||೬೮||

ಕರಣೇಂದ್ರಿಯ ಪದದಿಂದುಚ್ಚಳಿಸಿ
ತರಣಿಯ ಕಿರಣಂಗಳ ಗವಸಣಿಸಿ

ಪರಿಪೂರ್ಣಕ್ರಿಯೆಗಾಶ್ರಯವೆನಿಸಿ
ಸ್ಥಿರವಾಗಿಹುದನುಭವಸುಖವೆನಿಸಿ ॥೯೯॥

ಪ್ರೀತಿಯೊಳನುಕಂಪದಿನವಧೂತ
ಗೀತಿಯನನುನಯದಿಂ ಕೇಳ್ವಾತ
ರೀತದೊಳವತರಿಸದ ನಿರ್ಜಾತ
ಜ್ಯೋತಿಯೊಳವತರಿಸಿದ ಗತಭೀತ ॥೧೦೦॥

ಸ್ವಾನುಭವದ್ವಯದಿಂ ಗುರುಬಸವ
ತಾನವಧೂತನೆನಿಸಿ ಕೇಳ್ದಿರವ
ಜ್ಞಾನೋತ್ತರ ಮಾರ್ಗದ ಬಹುವಿಧವ
ಸಾನಂದದಿ ಪೇಳ್ದನು ನಿಜಮತವ ॥೧೦೧॥

---

The Vijay College
LIBRARY,
VIJAY COLLEGE.
BIJAPUR.